<u>ಓ.ಎಸ್. – 250/2016</u>

ಪಿ. ಡಬ್ಲೂ – 1

<u>ಸಾಕ್ಷಿಯನ್ನು ದಿಃ 04.04.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ.ಕೆ.ಎಲ್.ಬಿ ರವರಿಂದ</u>**

**1.** ಈ ದಾವೆಯಲ್ಲಿ ತಿದ್ದುಪಡಿ ವಾದ ಪತ್ರವನ್ನು ನಾನು ಸಲ್ಲಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೇ ನಂಬರ್ ಬದಲಾವಣೆ ಆಗಿರುವ ಬಗ್ಗೆ ನನಗೆ ದಾವೆ ಸಲ್ಲಿಸುವಾಗ ಮಾಹಿತಿ ಇರಲಿಲ್ಲ. ಕಾರಣ ಆಗ ಪೋಡಿ ಪ್ರಕ್ರಿಯೆ ನಡೆಯುತ್ತಿತ್ತು. ದಾವಾ ಎ ಶೆಡ್ಯೂಲ್ ಸ್ವತ್ತಿನ ಅಂದರೆ ಸರ್ವೇ ನಂಬರ್ 74/2 ರ

ಆರ್.ಟಿ.ಸಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ–42 ರಲ್ಲಿ ದಾವಾ ಸ್ವತ್ತು ಪೋಡಿಯಾದ ಕುರಿತು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ–45 ರಂತೆ ನಾನು ದಾವಾ ಸ್ವತ್ತಿನ ನನ್ನ ಸ್ವಾಧೀನಕ್ಕೆ ಅಡ್ಡಿ ಪಡಿಸಿದ ಊರಿನ ಜನರ ವಿರುದ್ಧ ದೂರನ್ನು ನೀಡಿದ್ದೇನೆ. ಸದರಿ ದೂರಿನಲ್ಲಿ ನನಗೆ ತೊಂದರೆ ನೀಡಿದ ವ್ಯಕ್ತಿಗಳ ಹೆಸರು ಬರೆದಿಲ್ಲ ಎಂದರೆ ಸರಿ. ನಿಪಿ–46 ರ ದೂರನಲ್ಲಿ ಆರೋಪಿತರ ಹೆಸರನ್ನು ಬರೆದಿಲ್ಲ ಎಂದರೆ ಸರಿ. ನಿಪಿ–46 ರಲ್ಲಿ ಕಂಡ ಗಣೇಶ ಎಂಬ ಆರೋಪಿತನನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ನಿಪಿ–47 ರ ಹಿಂಬರಹದಂತೆ ಗಣೇಶರವರ ವಿರುದ್ಧ ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಾನು ಸೈನಿಕ ಖೋಟಾದ ಅಡಿಯಲ್ಲಿ ಸರ್ವೇ ನಂಬರ್ 48 ರಲ್ಲಿ ಮಂಜೂರಾತಿ ಕೋರಿದ್ದೇನೆ. ನಾನು ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಸರ್ವೇ ನಂಬರ್ 48 ರ ಸ್ವತ್ತು ಸರ್ವೇ ನಂಬರ್ 74 ಎಂದು ಆಗಿತ್ತು ಎಂದರೆ ಸರಿಯಲ್ಲ. ಪೋಡಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಯಾವುದೇ ಗಡಿ ಗುರುತುಗಳು ಇಲ್ಲ ಎನ್ನುವುದು ಸರಿಯಲ್ಲ. ದಾವಾ ಸ್ವತ್ತನ್ನು ಪೋಡಿಗೆ ಒಳಪಡಿಸಿ ನನ್ನ ಸ್ವತ್ತನ್ನು ನಿಖರವಾಗಿ ಗುರುತಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.